ವಿಷಯ : ಭದ್ರಾ ಯೋಜನೆಯ ಅಧುನೀಕರಣಕ್ಕೆ ವಿಶ್ವಬ್ಯಾಂಕಿನ ನೆರವು ಪಡೆಯುವ ಬಗ್ಗೆ,

ಪ್ರಶ್ನೆ ಸಂಖ್ಯೆ 561 (1327) ಶ್ರೀ ಎಂ. ಜಿ. ಜರತಾರ್‌ಗರ್ (ಹುಬ್ಬಳ್ಳಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ಶಿವಮೊಗ್ಗ ಜಿಲ್ಲೆಯಲ್ಲಿ ಭದ್ರಾ ಯೋಜನೆಗೆ ವಿಶ್ವಬ್ಯಾಂಕಿನಿಂದ 60 ಕೋಟಿ ರೂಪಾಯಿ ಧನ ಸಹಾಯ ಪಡೆದುಕೊಳ್ಳುವ ಯೋಜನೆಯು ಯಾವ ಹಂತದಲ್ಲಿದೆ, ಹಾಗೂ ಯೋಜನೆಯಿಂದ ಕಾಲವೆಗಳನ್ನು ಅಧುನೀಕರಣಗೊಳಿಸಲಾಗುವುದೇ ;

ಆ. ಮೇಲ್ಕಂಡ ಯೋಜನೆಯಿಂದ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಎಕರೆ ಭೂಮಿ ನೀರಾವರಿಯಾಗುತ್ತದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು).—

ಅ. ಭದ್ರಾ ಯೋಜನೆಯ ಅಧುನೀಕರಣವನ್ನು ವಿಶ್ವಬ್ಯಾಂಕಿನ ನೆರವಿಗೆ ಸೂಚಿಸಲು ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಆ, ಮೇಲಿನ ಉತ್ತರದಿಂದಾಗಿ ಇದು ಈಗಲೇ ಉದ್ಭವಿಸುವುದಿಲ್ಲ.

ವಿಷಯ : ಬ್ಯಾಡಗಿ ತಾಲ್ಲೂಕಿನಲ್ಲಿ ಕಳೆದ ಒಂದು ವರ್ಷದಲ್ಲಿ ನಿರ್ಮಾಣ ಮಾಡಲಾದ ಡಾಂಬರು ರಸ್ತೆಗಳ ಕುರಿತು.

ಪ್ರಶ್ನೆ ಸಂಖ್ಯೆ 562 (1463) ಡಾಕ್ಟರ್ ಹೆಗ್ಗಪ್ಪ (ಬ್ಯಾಡಗಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ಬ್ಯಾಡಗಿ ತಾಲ್ಲೂಕಿನಲ್ಲಿ ಕಳೆದ ಒಂದು ವರ್ಷದಲ್ಲಿ ನಿರ್ಮಾಣ ಮಾಡಲಾದ ಡಾಂಬರು ರಸ್ತೆಯ ಉದ್ದವೆಷ್ಟು ;

ಆ. ಇದೇ ಅವಧಿಯಲ್ಲಿ ಬ್ಯಾಡಗಿ ತಾಲ್ಲೂಕಿನಲ್ಲಿ ನಿರ್ಮಾಣ ಮಾಡಲಾದ ಹೊಸ ರಸ್ತೆಯ ಉದ್ದವೆಷ್ಟು :

ಇ. ಈವರೆಗೆ ಬ್ಯಾಡಗಿ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರು ಯಾವ ಯಾವ ರಸ್ತೆ ಕಾರ್ಯಕ್ಕಾಗಿ ಒಟ್ಟು ಎಷ್ಟು ಹಣ ಖರ್ಚು ಮಾಡಿದ್ದಾರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ. 3 ಕಿ.ಮಿ. ಉದ್ದ ಡಾಂಬರು ರಸ್ತೆ (ಹೊಸದು) ನಿರ್ಮಿಸಲಾಗಿದೆ. ಇದಲ್ಲದೆ 2.40 ಕಿ.ಮಿ. ರಸ್ತೆಗೆ ಮರು ಡಾಂಬರು ಹಾಕಲಾಗಿದೆ. (82-83ರ ಸಾಲಿನಲ್ಲಿ).

ಆ. ಮೇಲ್ಕಾಣಿಸಿದ ಅವಧಿಯಲ್ಲಿ 15.20 ಕಿ.ಮಿ. ಉದ್ದ ರಸ್ತೆ ನಿರ್ಮಾಣ ಮಾಡಲಾಗಿದೆ.

ಇ. 83–84ರ ಸಾಲಿನಲ್ಲಿ ಬ್ಯಾಡಗಿ ತಾಲ್ಲೂಕಿನಲ್ಲಿ ವಿವಿಧ ರಸ್ತೆ ಕಾಮಗಾರಿಗಳಿಗಾಗಿ (ಅಂದರೆ ಎಂ.ಎನ್.ಪಿ. ಐ.ಸಿ.ಆರ್.ಪಿ. ಮಾಸ್ಟರ್ ಪ್ಲಾನ್, ಸಿ.ಡಿ. ವರ್ಕ್ಸ್ ಹರಿಜನವಾಡ ರಸ್ತೆ ನಿರ್ಮಾಣ ಅಭಿವೃದ್ಧಿ ಮತ್ತು ರಸ್ತೆ ನಿರ್ವಹಣೆ ಹಾಗೂ ದುರಸ್ತಿ ಇತ್ಯಾದಿ) ಒಟ್ಟು 9,52,080 ರೂಪಾಯಿಗಳನ್ನು ಫೆಬ್ರವರಿ ಕೊನೆಯ ವೇಳೆಗೆ ಖರ್ಚು ಮಾಡಲಾಗಿದೆ.

ವಿಷಯ : ಭದ್ರಾ ಯೋಜನೆಯ ಅಧುನೀಕರಣಕ್ಕೆ ವಿಶ್ವಬ್ಯಾಂಕಿನ ನೆರವು ಪಡೆಯುವ ಬಗ್ಗೆ.

ಪ್ರಶ್ನೆ ಸಂಖ್ಯೆ 561 (1327) ಶ್ರೀ ಎಂ. ಜಿ. ಜರತಾರ್‌ಗರ್ (ಹುಬ್ಬಳ್ಳಿ).–ಮಾನ್ಯ ಲೋಕೊಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ಶಿವಮೊಗ್ಗ ಜಿಲ್ಲೆಯಲ್ಲಿ ಭದ್ರಾ ಯೋಜನೆಗೆ ವಿಶ್ವಬ್ಯಾಂಕಿನಿಂದ 60 ಕೋಟಿ ರೂಪಾಯಿ ಧನಸಹಾಯ ಪಡೆದುಕೊಳ್ಳುವ ಯೋಜನೆಯು ಯಾವ ಹಂತದಲ್ಲಿದೆ, ಹಾಗೂ ಯೋಜನೆಯಿಂದ ಕಾಲುವೆಗಳನ್ನು ಅಧುನೀಕರಣಗೊಳಿಸಲಾಗುವುದೇ ;

ಆ. ಮೇಲ್ಕಂಡ ಯೋಜನೆಯಿಂದ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಎಕರೆ ಭೂಮಿ ನೀರಾವರಿಯಾಗುತ್ತದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ. ಭದ್ರಾ ಯೋಜನೆಯ ಅಧುನೀಕರಣವನ್ನು ವಿಶ್ವಬ್ಯಾಂಕಿನಿಂದ ನೆರವಿಗೆ ಸೂಚಿಸಲು ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಆ. ಮೇಲಿನ ಉತ್ತರದಿಂದಾಗಿ ಇದು ಈಗಲೇ ಉದ್ಭವಿಸುವುದಿಲ್ಲ.